ಅ) ಸ್ವತಂತ್ರ ಪ್ರೌಢ ಶಾಲಾ ಶಿಕ್ಷಕರು ಸರ್ಕಾರಿ ಆದೇಶ ಸಂಖ್ಯೆ:ಇಡಿ ೧೫೫ ಎಸ್‌ಬಿಎ ದಿನಾಂಕ ೩೦-೫-೮೫ರ ಪ್ರಕಾರ ನಿವೃತ್ತಿ ಉಪದಾನವನ್ನು ೧-೪-೬೩ ರಿಂದ ಪಡೆಯುತ್ತಿದ್ದು, ಸಂಯುಕ್ತ ಕಿರಿಯ ಕಾಲೇಜುಗಳಲ್ಲಿನ ಪ್ರೌಢಶಾಲಾ ವಿಭಾಗದ ಶಿಕ್ಷಕರು ಸರ್ಕಾರಿ ಆದೇಶ ಸಂಖ್ಯೆ/ಇಡಿ ೬೩ ಟಿಟಿಯು, ದಿನಾಂಕ ೨೨-೧೦-೨೭ರ ಪ್ರಕಾರ ೧-೪-೭೭ ರಿಂದ ಪಡೆಯುತ್ತಿರುವುದು ಸರ್ಕಾರಕ್ಕೆ ತಿಳಿದಿರುವುದೇ ?

ಆ) ಸ್ವತಂತ್ರ ಪ್ರೌಢಶಾಲಾ ವಿಭಾಗದ ಶಿಕ್ಷಕರು ಮತ್ತು ಸಂಯುಕ್ತ ಕಿರಿಯ ಕಾಲೇಜು ಶಿಕ್ಷಕರ ಹುದ್ದೆ ನೇಮಕಾತಿ ವೇತನಗಳಲ್ಲಿ ವ್ಯತ್ಯಾಸವಿದೆಯೇ ?

ಇ) ಸಂಯುಕ್ತ ಕಿರಿಯ ಕಾಲೇಜುಗಳಾಗಿ ವೀಲ್ಡ್‌ಜೆಗೆ ಏರಿಸುವ ಪೂರ್ವದಲ್ಲಿ ಪ್ರೌಢಶಾಲಾ ಶಿಕ್ಷಕರಾಗಿ ನೇಮಕವಾಗಿರುವ ಶಿಕ್ಷಕರನ್ನೂ ಕಡೆಗಣಿಸಲು ಕಾರಣವೇನು ?

ಈ) ಸಂಯುಕ್ತ ಕಿರಿಯ ಕಾಲೇಜಿನ ಪ್ರೌಢಶಾಲಾ ವಿಭಾಗದ ಶಿಕ್ಷಕರು ಸ್ವತಂತ್ರ ಪ್ರೌಢಶಾಲಾ ಶಿಕ್ಷಕರಿಗಿಂತ ಹೆಚ್ಚಿನ ಪ್ರಮಾಣದ ಆರ್ಥಿಕ ಸೌಲಭ್ಯವನ್ನು ಪಡೆಯುತ್ತಿದ್ದಾರೆಯೇ ?

ಶ್ರೀ ಬಿ. ಸೋಮಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಮಂತ್ರಿಗಳು).—

ಅ) ಸ್ವತಂತ್ರ ಪ್ರೌಢಶಾಲಾ ಶಿಕ್ಷಕರು ಮತ್ತು ಸಂಯುಕ್ತ ಕಿರಿಯ ಕಾಲೇಜುಗಳ ಪ್ರೌಢ ಶಾಲಾ ವಿಭಾಗದ ಶಿಕ್ಷಕರು ೧-೪-೬೩ ರಿಂದ ಅಥವಾ ಅವರು ಸೇವೆಗೆ ಸೇರಿದ ದಿನಾಂಕದಿಂದ ಅವರಲ್ಲಿ ಯಾವುದು ಕೊನೆಯೊಂದಿನಿಂದ ನಿವೃತ್ತಿ ಉಪದಾನ ಪಡೆಯುವರು.

ಆ) ಇಲ್ಲ

ಇ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಇಲ್ಲ.

೯೨೦ (೨೫೮೨) ಶ್ರೀಮತಿ ಮನೋರಮಾ ಮಧ್ವರಾಜ್ ಅವರ ಪರವಾಗಿ

ಶ್ರೀ ಬಿ. ಸ್ವಾಮಿರಾವ್.—ಮಾನ್ಯ ಅಧ್ಯಕ್ಷರೇ ಸ್ವತಂತ್ರವಾಗಿರತಕ್ಕಂಥ ಅನೇಕ ಕಾಲೇಜುಗಳಲ್ಲಿ ಪ್ರೌಢಶಾಲೆಗಳಲ್ಲಿ ಹಾಗೂ ಸಂಯುಕ್ತ ಕಿರಿಯ ಕಾಲೇಜುಗಳಲ್ಲಿ ಕೆಲಸ ಮಾಡತಕ್ಕಂಥ ಶಿಕ್ಷಕರುಗಳ ನೇಮಕಾತಿ ಮತ್ತು ವೇತನಗಳಲ್ಲಿ ವ್ಯತ್ಯಾಸವಿದೆ ಎಂದು ಕಂಡು ಬಂದಿದೆ. ಇದು ಸರ್ಕಾರದ ಗಮನಕ್ಕೆ ಬಂದಿರುತ್ತದೆಯೇ ಎಂದು ಕೇಳಬಯಸುತ್ತೇನೆ.

ಶ್ರೀ ಬಿ. ಸೋಮಶೇಖರ್.—ಮಾನ್ಯ ಅಧ್ಯಕ್ಷರೇ, ಸ್ವತಂತ್ರವಾಗಿರತಕ್ಕಂಥ ಪ್ರೌಢಶಾಲೆಗಳಲ್ಲಿ ಕೆಲಸ ಮಾಡತಕ್ಕಂಥ ಸಹ ಶಿಕ್ಷಕರಿಗೂ ಸಂಯುಕ್ತ ಕಿರಿಯ ಕಾಲೇಜುಗಳಲ್ಲಿ ಕೆಲಸ ಮಾಡತಕ್ಕಂಥ ಸಹ ಶಿಕ್ಷಕರಿಗೂ ಯಾವ ವಿಧವಾದ ವ್ಯತ್ಯಾಸವೂ ಇರುವುದಿಲ್ಲ.

ಶ್ರೀ ಎಂ. ಚಂದ್ರಶೇಖರ್. - ಪ್ರಶ್ನೆ ೨೭೫೨ ದ್ಯಾವೀರಪ್ಪನವರ ಪ್ರಶ್ನೆ ನಗರಾಭಿವೃದ್ಧಿ ಇಲಾಖೆಗೆ ಸಂಬಂಧ ಪಟ್ಟದ್ದು. ಅದು ಇವತ್ತು ಬರುವುದಿಲ್ಲ. ಮಾಲೂರು ಪಟ್ಟಣದಲ್ಲಿರತಕ್ಕ ರಸ್ತೆಯ ಬಗ್ಗೆ ಕೇಳಿದ್ದಾರೆ. ಆದ್ದರಿಂದ ಅದನ್ನು ಆ ಖಾತೆಗೆ ವರ್ಗಾವಣೆ ಮಾಡಲಾಗಿದೆ.

ಶ್ರೀ ಹೆಚ್. ಬಿ. ದ್ಯಾವೀರಪ್ಪ.— ನಾನು ಮಾಲೂರು ಶ್ರೀರಾಮದೇವರ ದೇವಸ್ಥಾನದ ರಸ್ತೆಯ ಬಗ್ಗೆ ಕೇಳಿದ್ದೇನೆ. ಆದರೆ ಇಲ್ಲಿ ತಪ್ಪಾಗಿ ಆಗಿದೆ. ಇದು ತಮಗೆ ಸಂಬಂಧಪಟ್ಟದ್ದು. ದಯವಿಟ್ಟು ಉತ್ತರ ನೀಡಿ. ಅದು ಮಾಲೂರು ಪಟ್ಟಣದಲ್ಲಿರತಕ್ಕದ್ದು ಇಲ್ಲ.

ಶ್ರೀ ಎಂ. ಚಂದ್ರಶೇಖರ್.—ಹಾಗಿದ್ದರೆ ಪೂರ್ಣ ವಿವರವನ್ನು ತರಿಸಿ ಒದಗಿಸಿ ಕೊಡುತ್ತೇನೆ. ಈಗ ನನ್ನ ಹತ್ತಿರ ಉತ್ತರ ಇಲ್ಲ.

ಚಿಕ್ಕಾ ಮತ್ತು ವರಾಹಿ ಯೋಜನೆಗಳಲ್ಲಿ ಮುಳುಗಡೆಯಾದ ಜಮೀನು

೯೨೨ (೨೭೦೦) ಶ್ರೀ ಬಿ. ಸ್ವಾಮಿರಾವ್ (ಹೊಸನಗರ).—ವಿದ್ಯುತ್ ರಾಜ್ಯ ಮಾನ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ಚಕ್ರಾ, ವರಾಹಿ, ಮುಳುಗಡೆಯಲ್ಲಿ ಜಮೀನು ಕಳೆದುಕೊಂಡ ರೈತರಿಗೆ ಪರಿಹಾರ ಕೊಡಲಾಗಿರುವವರ ಮತ್ತು ಕೊಡಬೇಕಾಗಿರುವವರ ಸಂಖ್ಯೆ ಎಷ್ಟು ?

ಆ) ಪುನರ್ವಸತಿ ಸೌಕರ್ಯ ಕೊಡಲಾಗಿರುವವರ ಜನರ ಸಂಖ್ಯೆ ಎಷ್ಟು ?

ಇ) ನಗದು ಹಣ ಪರಿಹಾರ ಕೊಡಲಾಗಿರುವ ಜನರ ಸಂಖ್ಯೆ ಎಷ್ಟು ?

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ರಾಜ್ಯ ಮಂತ್ರಿಗಳು).—

ಅ) ಚಕ್ರಾ ಯೋಜನೆಯಲ್ಲಿ ಮುಳುಗಡೆಯಾದ ಜಮೀನು ಕಳೆದುಕೊಂಡ ರೈತರಿಗೆಲ್ಲಾ ಪರಿಹಾರ ಧನ ಕೊಡಲಾಗಿದೆ. ವರಾಹಿ ಯೋಜನೆಯಲ್ಲಿ ಮುಳುಗಡೆ ವ್ಯಾಪ್ತಿಯಲ್ಲಿ ಬರುವ ಜಮೀನಿನ ಪೈಕಿ ೪೨೪೪ ಎಕರೆ ಜಮೀನಿಗೆ ಪರಿಹಾರ ಕೊಡಲಾಗಿದೆ. ಉಳಿದ ೩೧೩ ಎಕರೆಗೆ ಪರಿಹಾರ ಧನ ನೀಡಬೇಕಾಗಿದೆ.

ಆ) ಚಕ್ರಾ ಯೋಜನೆಯಲ್ಲಿ ಬಾಧಿತರಾದ ೩೦೦ ಕುಟುಂಬಗಳ ಪುನರ್ವಸತಿ ಕಾರ್ಯ ಮುಗಿದಿರುತ್ತದೆ. ವರಾಹಿ ಯೋಜನೆಯಲ್ಲಿ ಬಾಧಿತರಾದ ಕುಟುಂಬಗಳ ಪೈಕಿ ೫೨ ಕುಟುಂಬಗಳಿಗೆ ಪುನರ್ವಸತಿ ಸೌಕರ್ಯ ಕಲ್ಪಿಸಲಾಗಿದೆ.

ಇ) ವರಾಹಿ ಯೋಜನೆಯಲ್ಲಿ ಬಾಧಿತರಾದ ೮೨೧ ಕುಟುಂಬಗಳಿಗೆ ಪುನರ್ವಸತಿ ನಗದು ಹಣ ಕೊಡಲಾಗಿದೆ.

ಶ್ರೀ ಬಿ. ಸ್ವಾಮಿರಾವ್.—ಚಕ್ರ ಯೋಜನೆಯಲ್ಲಿ ಮುಳುಗಡೆಯಾದ ರೈತರಿಗೆ ಪರಿಹಾರ ಧನ ಕೊಡಲಾಗಿದೆ ಎಂದು ಹೇಳಿದ್ದಾರೆ. ಆದರೆ ಕೆಲವರಿಗೆ ಭೂತ್ರ ಕೊಟ್ಟಿದ್ದಾರೆ, ಎಲ್ಲರಿಗೂ ಕೊಟ್ಟಿಲ್ಲ. ವರಾಹಿ ಯೋಜನೆಯಲ್ಲಿ ಮುಳುಗಡೆಯಾಗಿರತಕ್ಕ ಬಗರ್‌ಹುಕುಂ ಜಮೀನಿಗೆ ಪರಿಹಾರ ಕೊಡಬೇಕೆಂಬ ಬಗ್ಗೆ ಹೈ ಪವರ್ ಕಮಿಟಿ ಮತ್ತು ಸರ್ಕಾರ ತೀರ್ಮಾನ ಮಾಡಿ ಕೊಟ್ಟಿದೆ. ಚಕ್ರ ಯೋಜನೆಯಲ್ಲಿ ಮುಳುಗಡೆ ಯಾದವರಿಗೆ ಕೊಟ್ಟಿಲ್ಲ. ಅವರು ಮನೆ ಮಠಗಳನ್ನು ಕಳೆದುಕೊಂಡು ಪರಿಹಾರವಿಲ್ಲದೆ ಒದ್ದಾಡುತ್ತಿದ್ದಾರೆ. ಅವರಿಗೆ ಯಾವಾಗ ಪರಿಹಾರ ಧನ ಕೊಡುತ್ತೀರಿ ?

ಶ್ರೀ ಲಕ್ಷ್ಮೀನರಸಿಂಹಯ್ಯ.—ಬಗರ್‌ಹುಕುಂ ಮಾಡುತ್ತಿದ್ದವರಿಗೆ ಪರಿಹಾರ ಕೊಡಬೇಕೆಂದು ತೀರ್ಮಾನವಾಗಿದ್ದರೂ ಅದರಲ್ಲಿ ಇನ್ನೂ ಕೆಲವರಿಗೆ ಪರಿಹಾರ ಸಿಕ್ಕಿಲ್ಲ. ಆ ಬಗ್ಗೆ ಆದಷ್ಟು ಬೇಗ ಕ್ರಮ ತೆಗೆದುಕೊಂಡು ಪರಿಹಾರ ಸಿಗುವುದಕ್ಕೆ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಬಿ. ಸ್ವಾಮಿರಾವ್.—ಚಕ್ರಾ ಯೋಜನೆಯಲ್ಲಿ ಮುಳುಗಡೆಯಾಗಿರತಕ್ಕ ೫೨ ಕುಟುಂಬದವರಿಗೆ ಶಿವಮೊಗ್ಗ ತಾಲ್ಲೂಕಿನ ಐಹೊಳೆಯಲ್ಲಿ ಮನೆ ಕಟ್ಟಿಸಿಕೊಟ್ಟಿದ್ದಾರೆ. ಜಮೀನನ್ನು ಹಂಚಿ ಕೊಡುವಲ್ಲಿ ಬಹಳ ಕಡಿಮೆ ಕೊಡುತ್ತಿದ್ದಾರೆ. ಮುಂಚೆ ೩ ಎಕರೆ ಕೊಡುತ್ತಿದ್ದರೆ ಈಗ ೨ ಎಕರೆ ಮಾತ್ರ ಕೊಡುತ್ತಿದ್ದಾರೆ. ಆದ್ದರಿಂದ ಬಹಳ ಅನ್ಯಾಯ ವಾಗುತ್ತಿದೆ. ಅವರಿಗೆ ರಿಸರ್ವ್ ಆಗಿರತಕ್ಕ ಭೂಮಿಯನ್ನು ಅಡಿಕೆ ಮಂಡಿಯವರು ಮತ್ತು ಪಕೀಲರು ವಶಪಡಿಸಿಕೊಂಡಿದ್ದಾರಲ್ಲದೆ ಅವರು ರೈತರಿಗೆ ಪದೇ ಪದೇ ತೊಂದರೆ ಕೊಡತ್ತಾರೆ. ಅದರ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಂಡಿಲ್ಲ. ಈಗಾಗಲೇ ಆ ಬಗ್ಗೆ ಹಲವಾರು ಸಭೆಗಳಲ್ಲಿ ಪ್ರಸ್ತಾಪ ಮಾಡಿದರೂ ಜಾಗಕ್ಕೆ ತಂದಿಲ್ಲ. ಕಂದಾಯ ಇಲಾಖೆಯವರನ್ನು ಕೇಳಿದರೆ ವಿದ್ಯುಚ್ಛಕ್ತಿ ಇಲಾಖೆಯನ್ನು ತೋರಿಸುತ್ತಾರೆ. ಈ ಪ್ರಶ್ನೆ ಯಾವಾಗ ಸಂಬಂಧಪಟ್ಟದ್ದು ಎಂಬ ಬಗ್ಗೆ ಜಿಜ್ಞಾಸೆ ಉಂಟಾದುದನ್ನು ಇಲ್ಲಿ ಕೂಡ ನೋಡಿದ್ದೇವೆ. ಆ ರೈತರು ಇವತ್ತಿನ ದಿವಸ ಕಣ್ಣೀರು ಕೂಳನ್ನು ತಿನ್ನುತ್ತಿದ್ದಾರೆ. ಆ ಬಗ್ಗೆ ಇಲಾಖೆಯವರು ಸೇರಿ ಸೂಕ್ತ ಕ್ರಮ ತೆಗೆದುಕೊಂಡು ಅವರ ಕಷ್ಟವನ್ನು ಬಗೆಹರಿಸುತ್ತೀರಾ ?

ಶ್ರೀ ಲಕ್ಷ್ಮೀನರಸಿಂಹಯ್ಯ.—ಈ ರೀತಿ ಕೆಲವು ಡಿಸ್‌ಪ್ಯೂಟ್‌ಗಳು ಇದ್ದುದರಿಂದ ೧೯೮೫ ನವೆಂಬರ್‌ನಲ್ಲಿ ಸರ್ಕಾರ ಒಂದು ಉನ್ನತಾಧಿಕಾರವುಳ್ಳ ಪುನರ್‌ವಸತಿ ಸಮಿತಿಯನ್ನು ರಚಿಸಿದೆ. ವರಾಹಿ ಮತ್ತು ಚಕ್ರಾ ಯೋಜನೆಗಳಿಗೆ ಸಂಬಂಧಪಟ್ಟ ಎಲ್ಲಾ ವಿಷಯಗಳು ಆ ಸಮಿತಿಯ ಮುಂದಿವೆ. ಆದನ್ನು ಸಾಧ್ಯವಾದಷ್ಟು ತ್ವರಿತಗೊಳಿಸಿ ಯಾರಿಗಾದರೂ ತೊಂದರೆಯಾಗಿದ್ದರೆ ಪರಿಹಾರ ನೀಡುವುದಕೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಬಿ. ಸ್ವಾಮಿರಾವ್.—ಈ ಬಗ್ಗೆ ಅನೇಕ ಸಾರಿ ವಿಧಾನಸಭೆಯಲ್ಲಿ ಪ್ರಸ್ತಾಪ ಮಾಡಿದ್ದೇನೆ. ಅಲ್ಲಿ ಹಣ ಇರತಕ್ಕವರು, ಜಿನುಕೂಲಸ್ಥರು ಮುಳುಗಡೆ ಯಾಗುವ ಜಮೀನಿಗಿಂತ ಪೇಟೆಯಲ್ಲಿರುವ

ತಮ್ಮ ಬಂಗಲೆಗೆ ಹೆಚ್ಚು ಪರಿಹಾರ ತೆಗೆದುಕೊಳ್ಳುವುದಕ್ಕೆ ವ್ಯವಸ್ಥೆ ಮಾಡಿಕೊಂಡು ಪರಿಹಾರವನ್ನು ತೆಗೆದುಕೊಂಡಿದ್ದಾರೆ. ಬಡ ರೈತರ ಮನೆ, ಜಮೀನು ಮುಳುಗಡೆಯಾಗಿದ್ದು ಬಹಳಷ್ಟು ಒತ್ತಾಯ ಮಾಡಿದರೂ ಪರಿಹಾರ ದೊರೆತಿಲ್ಲ. ಅನೇಕ ಜನ ಕೋರ್ಟ್ ಕಛೇರಿ ಕಾಣದೆ ಇದ್ದವರಿಗೆ ಪರಿಹಾರ ಬಂದಿಲ್ಲ. ಉದಾಹರಣೆಗೆ ಮೇಗರವಳ್ಳಿ, ಯಡಿಯೂರು, ತೀರ್ಥಹಳ್ಳಿಯಲ್ಲಿರುವ ಮನೆಗಳಿಗೆ ಪರಿಹಾರ ತೆಗೆದುಕೊಂಡಿದ್ದಾರೆ. ಮತ್ತೆ ಇನ್ನೂ ಅವರ ಜಮೀನು ಮುಳುಗಡೆಗೆ ಸೇರದೇ ಹೋದರೂ ಅವರೇ ಟ್ರೆಂಚನ್ನು ಸೃಷ್ಟಿ ಮಾಡಿ ಭೂ ಸ್ವಾಧೀನಾಧಿಕಾರಿಗಳ ಗಮನಕ್ಕೆ ಬರದಂತೆ ಡಿಫ್ಯುಟಿ ಸೆಕ್ರೆಟರಿಯವರು ರೆವಿನ್ಯೂ ಇಲಾಖೆಯಿಂದ ನೋಟಿಫಿಕೇಷನ್ ಜೊರಡಿಸಿದ್ದಾರೆ. ಅವರಿಗೆ ಏನು ಸಂಬಂಧ ಇದೆ ? ಅವರು ಯಾರು ಇದನ್ನು ಮಾಡುವುದಕ್ಕೆ ? ಅವರು ಸ್ಥಳ ನೋಡಿದ್ದಾರೋ ಇಲ್ಲವೋ ಗೊತ್ತಿಲ್ಲ. ಸರ್ವೆ ನಂಬರ್ ೧೪೭ ಮುಳುಗಡೆ ಆಗುವುದಿಲ್ಲ. ಅದು ಯಡಿಯೂರು ಟೌನ್‌ನಲ್ಲಿದೆ. ಟೌನಿನಲ್ಲಿರುವಕ್ಕೆ ತೆಂಗಿನ ತೋಟ, ಮನೆಯನ್ನು ಮುಳುಗಡೆಗೆ ಸೇರಿಸಿ ದುಡ್ಡು ಲಪಟಾಯಿಸುವ ಕೆಲಸವನ್ನು ಅಲ್ಲಿನ ಅಧಿಕಾರಿಗಳು ಮತ್ತು ವಿಧಾನಸೌಧದಲ್ಲಿರುವ ಅಧಿಕಾರಿಗಳು ಮಾಡಿದ್ದಾರೆ. ಯಾವ ಕಾರಣಕ್ಕಾಗಿ ಅದನ್ನು ಸೇರಿಸಿದ್ದೀರಿ ಎಂದು ನಾನು ಪತ್ರ ಬರೆದಿದ್ದೇನೆ. ಇಪತ್ತಿನವರೆಗೂ ಅದಕ್ಕೆ ಉತ್ತರ ಬರೆದಿಲ್ಲ.

ಶ್ರೀ ಜೆ. ಹೆಚ್. ಪಟೇಲ್.—ಮುಳುಗಡೆ ಆಗುವ ಜಮೀನಿನ ಬಗ್ಗೆ ಇರುವ ಹೈ ಪವರ್ ಕಮಿಟಿಗೆ ಸನ್ಮಾನ್ಯ ಸದಸ್ಯರಾದ ಸ್ವಾಮಿರಾವ್ ಅವರೂ ಸದಸ್ಯರು. ಈ ಸಮಸ್ಯೆಯನ್ನು ಆ ಸಮಿತಿಯಲ್ಲಿ ಪ್ರಸ್ತಾಪ ಮಾಡಿದ್ದೇವೆ. ಆದರೆ ವಿವರಗಳನ್ನು ಇಲ್ಲಿ ಕಾಳಿತು ಚರ್ಚೆ ಮಾಡುವ ಬದಲು, ಯಡಿಯೂರಿನಲ್ಲಿ ಯಾವುದೋ ಸರ್ವೇ ನಂಬರ್ ಬಗ್ಗೆ ಏನಾಗಿದೆ ಎಂದು ಕೇಳುವ ಬದಲು ಆ ಸಭೆಯಲ್ಲೇ ಚರ್ಚೆ ಮಾಡೋಣ ಎಂದು ತಮ್ಮ ಮೂಲಕ ಅವರಲ್ಲಿ ವಿನಂತಿ ಮಾಡಿ ಕೊಳ್ಳುತ್ತೇನೆ.

ಶ್ರೀ ಬಿ. ಸ್ವಾಮಿರಾವ್.—ನಾವು ಸದಸ್ಯನೂ ಹೌದು, ಅವರು ಅಧ್ಯಕ್ಷರೂ ಹೌದು. ಹೈ ಪವರ್ ಕಮಿಟಿ ಸಭೆಯನ್ನು ಯಾವತ್ತೋ ಕರೆಯುತ್ತಾರೆ. ಆಗ ಪರಿಹಾರಕ್ಕಾಗಿ ಜನರು ಹಾತೊರೆಯುತ್ತಿರುತ್ತಾರೆ. ನಮ್ಮ ಜಮೀನು ಮುಳುಗಿ ಹೋಗುತ್ತದಲ್ಲ ಎಂಬ ಸಂಕಟದಲ್ಲಿರುತ್ತಾರೆ. ಅರ್ಧ ಗಂಟೆ ಕಾಲದ ಸಭೆ ಕರೆದಾಗ ಅಲ್ಲಿ ನಾವು ಏನೂ ಹೇಳುವುದಕ್ಕಾಗುವುದಿಲ್ಲ. ಯಾವಾಗ ಮೀಟಿಂಗ್ ಕರೆಯುತ್ತೀರಿ ಎಂದು ಆ ಕಮಿಟಿ ಅಧ್ಯಕ್ಷರನ್ನು ಕೇಳುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್.—ಆದಷ್ಟು ಬೇಗ ಕರೆಯುತ್ತೇನೆ.

ನೋಣಾಲ್ ಪ್ರೌಢಶಾಲೆಯಲ್ಲಿ ಶಿಕ್ಷಕರ ಕೊರತೆ

೯೨೩ (೨೫೧೭) ಶ್ರೀ ರಮಾನಾಥ ರೈ (ಬಂಟ್ವಾಳ).—ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಬಂಟವಾಳ ತಾಲ್ಲೂಕಿನ ವಾಮನ ಪದ ಕಿರಿಯ ಕಾಲೇಜು, ಮಣಿನಾಲೂರು ಪ್ರೌಢಶಾಲೆ, ನೋಣಾಲ್ ಪ್ರೌಢಶಾಲೆಗಳಲ್ಲಿ ಶಿಕ್ಷಕರ ಕೊರತೆ ಇದೆಯೇ ? ಇದ್ದರೆ ಅವುಗಳ ಸಂಖ್ಯೆ ಎಷ್ಟು (ವಿವರ ನೀಡುವುದು)

ಆ) ಸದರಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರವು ತೆಗೆದುಕೊಂಡಿರುವ ಕ್ರಮವೇನು ?

ಶ್ರೀ ಬಿ. ಸೋಮಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು).—

ಅ) ವಾಮನಪದವು ಕಿರಿಯ ಕಾಲೇಜಿನಲ್ಲಿ ಇಂಗ್ಲೀಷ್ ಉಪನ್ಯಾಸಕರ ಹುದ್ದೆ ಖಾಲಿ ಇದೆ. ಕೆಳಗಿನ ಪ್ರೌಢಶಾಲಾ ವಿಭಾಗದಲ್ಲಿ ಖಾಲಿ ಹುದ್ದೆಗಳ ವಿವರ ಈ ರೀತಿ ಇದೆ.

ವಾಮನ ಪದವು	೫
ಮಣಿನಾಲೂರು	೫
ನೇಗಾಲ್	೨